ಅಜ್ಜಂಪುರ ಮತ್ತು ತರೀಕೆರೆಯಲ್ಲಿ ಪರಿಶಿಷ್ಟ ಜಾತಿ / ವರ್ಗಗಳ ಬಾಲಕರು ಹಾಸ್ಟಲ್ ಮತ್ತು ಆಶ್ರಮ ಶಾಲೆ ಕಟ್ಟಡ

1637 (1883) : ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ತರೀಕೆರೆ ತಾಲ್ಲೂಕಿನಲ್ಲಿ ಅಜ್ಜಂಪುರ ಮತ್ತು ತರೀಕೆರೆಯಲ್ಲಿ ಬಾಲಕರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಹಾಸ್ಟೆಲುಗಳ ಕಟ್ಟಡ ಕಟ್ಟಲು ಸರ್ಕಾರ ಆಲೋಚಿಸಿದೆಯೇ;

(ಆ) ಇದಕ್ಕೆ ತಗಲುವ ವೆಚ್ಚವೆಷ್ಟು;

(ಇ) ಈ ಹಾಸ್ಟೆಲು ನಿರ್ಮಿಸಲು ಸ್ಥಳಾವಕಾಶ ಕಲ್ಪಿಸಿದರೂ ವಿಳಂಬವಾಗಲು ಕಾರಣವೇನು;

(ಈ) ಈ ಹಾಸ್ಟೆಲುಗಳಿಗೆ ಆಡಳಿತಾತ್ಮಕ ಮಂಜೂರಾತಿ ಎಂದು ನೀಡಲಾಗುವುದು;

(ಉ) ತರೀಕೆರೆ ತಾಲ್ಲೂಕಿನಲ್ಲಿ ಎಂ. ಸಿ. ಹಳ್ಳಿಯಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ಆಶ್ರಮಶಾಲೆಗೆ ಎಂದು ಆಡಳಿತಾತ್ಮಕ ಮಂಜೂರಾತಿ ನೀಡಲಾಗುವುದು;

(ಊ) ತರೀಕೆರೆ ತಾಲ್ಲೂಕು ಶಿವನಿಯ ಎಸ್. ಸಿ : ಎಸ್. ಟಿ. ಹಾಸ್ಟೆಲು ಕಟ್ಟಲು ಅಂದಾಜುನಕ್ಕೆ ಆಗಿದೆಯಾ, ಆಡಳಿತಾತ್ಮಕ ಮಂಜೂರಾತಿ ಎಂದು ನೀಡಲಾಗುವುದು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

(ಅ) ಹೌದು

(ಆ) 1999-2000ನೇ ಸಾಲಿನ ದರಗಳಂತೆ ತಯಾರಿಸಿರುವ ಅಂದಾಜು ಮತ್ತು ನಕ್ಷೆಯ ಪ್ರಕಾರ ಅಜ್ಜಂಪುರ ವಿದ್ಯಾರ್ಥಿನಿಲಯಕ್ಕೆ ರೂ. 29.92 ಲಕ್ಷಗಳು ಹಾಗೂ ತರೀಕೆರೆ ವಿದ್ಯಾರ್ಥಿನಿಲಯಕ್ಕೆ ರೂ. 29.45 ಲಕ್ಷಗಳು.

(ಇ) 2000ನೇ ಮಾರ್ಚ್ ಅಂತ್ಯದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಬಂದಿದ್ದು ಅದು ಪರಿಶೀಲನೆಯಲ್ಲಿದೆ.

(ಊ) ಇಲ್ಲ

ಯಗಚಿ ಅಣೆಕಟ್ಟಿನಿಂದ ಬೇಲೂರು ಪಟ್ಟಣಕ್ಕೆ ಕುಡಿಯುವ ನೀರು ಒದಗಿಸುವುದು

1638 (1888) : ಶ್ರೀ ಪುಟ್ಟರಂಗನಾಥ್. ಎಸ್. ಹೆಚ್. (ಬೇಲೂರು) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಯಗಚಿ ಅಣೆಕಟ್ಟಿನಿಂದ ಬೇಲೂರು ಪಟ್ಟಣಕ್ಕೆ ಎಂದಿನಿಂದ ಕುಡಿಯುವ ನೀರು ಸರಬರಾಜು ಮಾಡಲಾಗುವುದು?

ಶ್ರೀ ಬಿ. ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) :

(ಅ) ಯಗಚಿ ಅಣೆಕಟ್ಟಿನಿಂದ ಬೇಲೂರು ಪಟ್ಟಣಕ್ಕೆ ನೀರು ಸರಬರಾಜು ಮಾಡುವ ಕಾಮಗಾರಿಗಳು ಮುಗಿಯುವ ಹಂತದಲ್ಲಿದ್ದು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದಿಂದ

ವಿದ್ಯುತ್ ಸರಬರಾಜು ಪಡೆದು ಯಂತ್ರೋಪಕರಣಗಳನ್ನು ಚಾಲೂಗೊಳಿಸಿ ಕೊಳವೆ ಮಾರ್ಗವನ್ನು ಒತ್ತಡ ಪರೀಕ್ಷೆಗೆ ಒಳಪಡಿಸಿ ನೀರು ಸರಬರಾಜು ಮಾಡಲಾಗುವುದು. ಈ ಯೋಜನೆಯನ್ನು ಜೂನ್ : ಜುಲೈ 2000ದ ವೇಳೆಗೆ ಕಾರ್ಯಗತ ಗೊಳಿಸಬಹುದು.

ಹಾಸನ ಜಿಲ್ಲೆಯಲ್ಲಿ ಅನುದಾನದಲ್ಲಿ ಒಳಪಡುವ ಮೆಟ್ರಿಕ್ ಪೂರ್ವ ಬಾಲಕರ : ಬಾಲಕಿಯರ ನಿಲಯಗಳಿಷ್ಟು

1639 (1889) : ಶ್ರೀ ಪುಟ್ಟರಂಗನಾಥ್. ಎಸ್. ಹೆಚ್. (ಬೇಲೂರು) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಹಾಸನ ಜಿಲ್ಲೆಯಲ್ಲಿ ಅನುದಾನಕ್ಕೆ ಒಳಪಡುವ ಮೆಟ್ರಿಕ್ ಮತ್ತು ಮೆಟ್ರಿಕ್ ಪೂರ್ವ ಬಾಲಕ : ಬಾಲಕಿಯರ ನಿಲಯಗಳೆಷ್ಟು; ಕಾಲೇಜು ವಿದ್ಯಾರ್ಥಿನಿಲಯಗಳೆಷ್ಟು; ವಿವರ ನೀಡುವುದು;

(ಆ) ಇಲಾಖೆಯ ವತಿಯಿಂದ ನಡೆಸುತ್ತಿರುವ ವಿದ್ಯಾರ್ಥಿನಿಲಯಗಳೆಷ್ಟು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

(ಅ) ಹಾಸನ ಜಿಲ್ಲೆಯಲ್ಲಿ 12 ಮೆಟ್ರಿಕ್ ಪೂರ್ವ ಖಾಸಗಿ ಅನುದಾನಿತ ವಿದ್ಯಾರ್ಥಿನಿಲಯಗಳು ಇವೆ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. ಈ ಜಿಲ್ಲೆಯಲ್ಲಿ ಯಾವುದೇ ಅನುದಾನಿತ ಕಾಲೇಜು ವಿದ್ಯಾರ್ಥಿನಿಲಯಗಳು ಇರುವುದಿಲ್ಲ.

(ಆ) ಸಮಾಜ ಕಲ್ಯಾಣ ಇಲಾಖೆವತಿಯಿಂದ 55 ಮೆಟ್ರಿಕ್ ಪೂರ್ವ ಮತ್ತು 7 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳನ್ನು, ಹಿಂದುಳಿದ ವರ್ಗಗಳ ಇಲಾಖೆವತಿಯಿಂದ 56 ಮೆಟ್ರಿಕ್ ಪೂರ್ವ ಮತ್ತು 8 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳನ್ನು ನಡೆಸಲಾಗುತ್ತಿದೆ.

ಅನುಬಂಧ

ಹಾಸನ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಸಗಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳ ವಿವರಗಳು:-

ಹಿಂದುಳಿದ ವರ್ಗದವರಿಗಾಗಿ:-

1. ಶ್ರೀ. ಮಲ್ಲಿಕಾರ್ಜುನಸ್ವಾಮಿ ಸಾರ್ವಜನಿಕ ವಿದ್ಯಾರ್ಥಿನಿಲಯ, ಯಡವನಹಳ್ಳಿ, ಅರಸೀಕೆರೆ ತಾಲ್ಲೂಕು.
2. ಶ್ರೀ. ಶಿವನಂಜುಂಡೇಶ್ವರ ಸಾರ್ವಜನಿಕ ಪ್ರಸಾದನಿಲಯ, ಕಣೆಕಟ್ಟೆ, ಅರಸೀಕೆರೆ ತಾಲ್ಲೂಕು.
3. ಶ್ರೀ. ಶಿವನಂಜುಂಡೇಶ್ವರ ಪ್ರಸಾದನಿಲಯ, ಅರಳೀಕಟ್ಟೆ, ಅರಸೀಕೆರೆ ತಾಲ್ಲೂಕು.
4. ಶ್ರೀ. ಜಗದ್ಗುರು ಶಿವಲಿಂಗೇಶ್ವರ ಸಾರ್ವಜನಿಕ ವಿದ್ಯಾರ್ಥಿನಿಲಯ, ಕೋಡಿಮಠ, ಅರಸೀಕೆರೆ ತಾಲ್ಲೂಕು.